# ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

## " ಹವ್ಯಕರ ಸಾಂಸ್ಕೃತಿಕ ಅಧ್ಯಯನ "

**ಸ್ನಾತಕೋತ್ತರ ಪದವಿ**


ಸಂಶೋಧಕರು

ಸುಚಿತ್ರಾ ವಿಷ್ಣು ನಾಯ್ಕ

**ರೆಜಿಸ್ಟರ್ ನಂಬರ್**

P02JK21A0005

ಸಂಶೋಧನಾ ಮಾರ್ಗದರ್ಶಕರು

ಪ್ರೊ. ಆರ್. ಎಸ್. ನಾಯಕ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಅಂಜುಮಾನ್ ಕನ್ನಡ ಸ್ನಾತಕೋತ್ತರ ಕೇಂದ್ರ,

ಭಟ್ಕಳ (ಉ.ಕ)


ಕರ್ನಾಟಕ ವಿಶ್ವವಿದ್ಯಾಲಯದ ಎಂ. ಎ ಪದವಿಯ ೪ ನೇ
ಸೆಮಿಸ್ಟರ್ ಗಾಗಿ ಒಪ್ಪಿಸಲಾದ ಸಂಶೋಧನಾ ಕಿರು ಪ್ರಬಂಧ

**ಅಂಜುಮಾನ್ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ**
**ಹಾಗೂ ಸ್ನಾತಕೋತ್ತರ ಕೇಂದ್ರ**
**ಭಟ್ಕಳ ಉತ್ತರ ಕನ್ನಡ ೫೮೧೩೨೦**

**ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ**
**೨೦೨೨-೨೦೨೩**


ANJUMAN ARTS, SCIENCE & COMMERCE COLLEGE ★
BHATKAL
581320
(U.K.)



Scanned with OKEN Scanner

# ಘೋಷಣಾ ಪತ್ರ

ಈ ಸಂಶೋಧನಾ ಕಿರು ಪ್ರಬಂಧವನ್ನು ಎಂ.ಎ ಸ್ನಾತಕೋತ್ತರ ಪದವಿ ಭಾಗಶಃ ಅವಶ್ಯಕತೆಯನ್ನು ಪೂರೈಸುವ ದೃಷ್ಟಿಯಿಂದ ಹವ್ಯಕ ಬ್ರಾಹ್ಮಣರ ಸಾಂಸ್ಕೃತಿಕ ಅಧ್ಯಯನ ಮಾಡಿ ಸಿದ್ಧಪಡಿಸಿದ್ದೇನೆ. ಈ ಪ್ರಬಂಧದ ಯಾವುದೇ ಭಾಗವನ್ನಾಗಲಿ, ಇಡೀ ಪ್ರಬಂಧವನ್ನಾಗಲೀ ಬೇರೆ ಯಾವುದೇ ವಿಶ್ವವಿದ್ಯಾಲಯದ ಬೇರೆ ಪದವಿಗಾಗಿ ಒಪ್ಪಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಭಟ್ಕಳ
ದಿನಾಂಕ :

ಸಂಶೋಧನಾ ವಿದ್ಯಾರ್ಥಿ
( ಸುಚಿತ್ರಾ ವಿಷ್ಣು ನಾಯ್ಕ )

ಮಾರ್ಗದರ್ಶಕರು :

ಪ್ರೊ. ಆರ್. ಎಸ್. ನಾಯಕ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಅಂಜುಮಾನ್ ಕನ್ನಡ ಸ್ನಾತಕೋತ್ತರ ಕೇಂದ್ರ
ಭಟ್ಕಳ ಉತ್ತರ ಕನ್ನಡ

PRINCIPAL
Anjuman Arts, Science & Commerce College
& P.G. Centre
BHATKAL-581 320

Scanned with OKEN Scanner

# ಪರಿವಿಡಿ


| ಅ. ನಂ | ವಿಷಯ | ಪುಟದ ಸಂಖ್ಯೆ |
|---|---|---|
| ೧ | ಪೀಠಿಕೆ | ೦ - ೧ |
| ೨ | ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ | ೨ - ೨ |
| ೩ | ಹವ್ಯಕ ಬ್ರಾಹ್ಮಣರ ಮೂಲ | ೩ - ೩ |
| ೪ | ಹವ್ಯಕ ಬ್ರಾಹ್ಮಣರ ಭಾಷೆ | ೪ - ೬ |
| ೫ | ಹವ್ಯಕ ಬ್ರಾಹ್ಮಣರ ವೇದ, ಗೋತ್ರಗಳು | ೦೭ - ೦೭ |
| ೬ | ಹವ್ಯಕ ಬ್ರಾಹ್ಮಣರ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ | ೦೮ - ೦೮ |
| ೭ | ಹವ್ಯಕ ಬ್ರಾಹ್ಮಣರ ಆಹಾರ | ೦೯ - ೦೯ |
| ೮ | ಹವ್ಯಕ ಬ್ರಾಹ್ಮಣರ ಧಾರ್ಮಿಕ ಸಂಸ್ಕಾರಗಳು | ೧೦ - ೧೩ |
| ೯ | ಹವ್ಯಕ ಬ್ರಾಹ್ಮಣರ ಹಬ್ಬಗಳು ಮತ್ತು ಸಂಪ್ರದಾಯ | ೧೪ - ೧೯ |
| ೧೦ | ಹವ್ಯಕ ಬ್ರಾಹ್ಮಣರ ಮದುವೆ ಪದ್ಧತಿ | ೨೦- ೨೯ |
| ೧೧ | ಉಪಸಂಹಾರ | ೩೦ - ೩೦ |
| ೧೨ | ಛಾಯಾಚಿತ್ರಗಳು | ೩೧ - ೩೪ |
| ೧೩ | ಆಧಾರ ಗ್ರಂಥಗಳು | ೩೫ - ೩೫ |


Scanned with OKEN Scanner

# ೧)ಪೀಠಿಕೆ

ಪ್ರತಿಯೊಬ್ಬರೂ ತಮ್ಮ ಮನೆತನ, ಜಾತಿ, ಧರ್ಮ ಪರಂಪರೆ, ತಿಳಿದುಕೊಳ್ಳುವುದು ಮುಖ್ಯವಾದ ಕರ್ತವ್ಯವಾಗಿದೆ. ಈ ಸಂಶೋಧನಾ ಕಿರು ಪ್ರಬಂಧದ ಮೂಲಕ ಹವ್ಯಕ ಬ್ರಾಹ್ಮಣರ ಜನಾಂಗದ ಇತಿಹಾಸಗಳನ್ನು ತಿಳಿಯಬಹುದು. ಒಬ್ಬ ವ್ಯಕ್ತಿಗೆ ತನ್ನ ಜೀವನದ ಇತಿಹಾಸ ಇರುವಂತೆಯೇ, ಪ್ರತಿಯೊಂದು ವಂಶ, ಜನಾಂಗ ದೇಶಗಳಿಗೂ ತನ್ನದೇ ಆದ ಒಂದು ಸ್ವತಂತ್ರ ಇತಿಹಾಸವಿರುತ್ತದೆ. ಹವ್ಯಕರು ಮೂಲತಃ ವೈದಿಕರು, ನಮ್ಮ ಇತಿಹಾಸವೂ ಅದನ್ನೇ ಸಾರುತ್ತದೆ. ಆರಂಭದಲ್ಲಿ ಭಟ್ಟ ಎನ್ನುವ ಉಪಾಧಿವಂತರು ಮಾತ್ರ ಅಧ್ಯಯನ ಮಾಡಿ ವೇದಾಧ್ಯಯನ ಮಾಡಿಕೊಂಡು ಜೀವನೋಪಾಯ ಮಾಡುವ ಮಾರ್ಗ ರೂಡಿಗೆ ಬಂತು, ಅದೇ ಮುಂದೆ ಅಧಿಕ ಹಣ ಸಂಪಾದನೆಯ ಮೂಲಗಳಾದ ವಿವಿಧ ಉದ್ಯಮ ಉದ್ಯೋಗಗಳನ್ನು ಕಂಡುಕೊಂಡು ಪಟ್ಟಣ, ನಗರ, ಮಹಾನಗರ ಸೇರಿ ಅವರ ಜೀವನದ ಅವಿಭಾಜ್ಯ ಕೃಷಿ ಮತ್ತು ಸಂಸ್ಕಾರಯುತ ಬದುಕನ್ನು ಕಟ್ಟಿಕೊಳ್ಳುವಲ್ಲಿ ಹಿನ್ನಡೆಯಾದರು.  ಹವ್ಯಕ ಕನ್ನಡ, ಹೈಗ ಕನ್ನಡ, ಹವಿಗನ್ನಡ ಅಥವಾ ಹವ್ಯಕ ಭಾಷೆ ಹವ್ಯಕ ಜನಾಂಗದವರು ಬಳಸುವ ಕನ್ನಡ ಭಾಷೆ. ಇದು ಕನ್ನಡದ ಉಪಭಾಷೆ. ಇದು ಹಳೆಗನ್ನಡಕ್ಕೆ ಹತ್ತಿರವಿರುವುದರಿಂದ ಬಹಳಷ್ಟು ಕನ್ನಡಿಗರಿಗೆ ಅರ್ಥವಾಗುವುದು ಕಷ್ಟ.ಹವೀಕರು ಬೇರೆಯವರಿಗಿಂತ ಸ್ವಲ್ಪ ಬಿಳಿ ಎಂದೂ ಅಡಿಕೆ ವ್ಯವಸಾಯದಲ್ಲಿ ನಿಷ್ಣಾತರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದಲ್ಲಿ ಹವ್ಯಕರ ಪಾತ್ರ ಗಣನೀಯವಾಗಿದೆ. ಉಪ್ಪಿನ ಸತ್ಯಾಗ್ರಹ, ಅಸಹಕಾರ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಪ್ರಪಂಚದಾದ್ಯಂತ ಹವ್ಯಕರ ಜನಸಂಖ್ಯೆಯು ಸುಮಾರು 1,00,000 ಹೆಚ್ಚಿರಬಹುದು ಎಂದು ಅಂದಾಜಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಕೆಲವು ಹವಿಗನ್ನಡ ಭಾಷಿಕರು ಸ್ತ್ರೀಲಿಂಗವನ್ನು ಸಂಬೋಧಿಸುವಾಗ ಸ್ತ್ರೀಲಿಂಗದ ಬದಲಿಗೆ ತಟಸ್ಥ ಲಿಂಗವನ್ನು ಬಳಸುತ್ತಾರೆ. ಆದರೆ ಕರ್ನಾಟಕದ ಕೆಲವು ಭಾಗಗಳಾದ ಕುಂದಾಪುರ, ತೀರ್ಥಹಳ್ಳಿ ಮತ್ತು ಕೊಡಗಿನ ಹವ್ಯಕರು ಹವಿಗನ್ನಡ ಮಾತನಾಡುವುದಿಲ್ಲ.

ಹವ್ಯಕರ ಜೀವನಾಧಾರ ಮೊದಲಿನಿಂದಲೂ ಕೃಷಿ ಚಟುವಟಿಕೆಗಳು. ಅಡಿಕೆ, ತೆಂಗು, ಭತ್ತ, ಏಲಕ್ಕಿ,  ಕಾಳು ಮೆಣಸು, ವೀಳ್ಯದೆಲೆ ಮುಂತಾದವುಗಳನ್ನು ಬೆಳೆಯುತ್ತಿದ್ದರು. ಇದರ ಜೊತೆ ಅನೇಕ ಕುಟುಂಬಗಳು ಪೌರೋಹಿತ್ಯವನ್ನು ಕೂಡ ವೃತ್ತಿಯಾಗಿರಿಸಿಕೊಂಡಿದ್ದವು. ಇವತ್ತಿಗೂ ಕೃಷಿಯೇ ಹವ್ಯಕರ ಮುಖ್ಯ ಉದ್ಯೋಗವಾಗಿದ್ದರೂ ಕೂಡ ಇತ್ತೀಚಿನ ಕೆಲದಶಕಗಳಿಂದ ಹವ್ಯಕರು ಬೇರೆ ಬೇರೆ ಎಲ್ಲಾ ಕ್ಷೇತ್ರಗಳಲ್ಲೂ ತೊಡಗಿಕೊಂಡಿದ್ದಾರೆ. ಧಾರ್ಮಿಕವಾಗಿ ಹವ್ಯಕರು ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಸ್ವರ್ಣವಲ್ಲಿ ಮಠ ಮತ್ತು ರಾಮಚಂದ್ರಾಪುರ ಮಠಗಳ ಅನುಯಾಯಿಗಳಾಗಿದ್ದಾರೆ. ವಿಶ್ವದಲ್ಲಿನ ಹವ್ಯಕರ ಜನಸಂಖ್ಯೆ ಸುಮಾರು ಆರು ಲಕ್ಷ ಎಂದು ಅಂದಾಜಿಸಲಾಗಿದೆ. ಹಳ್ಳಿಗಳಲ್ಲೇ ಹವ್ಯಕರ ಹೆಚ್ಚಿನ ಜನಸಂಖ್ಯೆ ಇದ್ದರೂ ಕೂಡ ಇತ್ತೀಚಿನ ದಿನಗಳಲ್ಲಿ ನಗರಗಳಿಗೆ ವಲಸೆ ಹೋಗುತ್ತಿರುವುದರಿಂದ ಹಳ್ಳಿಯಲ್ಲಿ ಹವ್ಯಕರ ಜನಸಂಖ್ಯೆ ಪ್ರಮಾಣ ಕುಸಿದಿದೆ. ಹವ್ಯಕರ ಮೂಲ,ಧಾರ್ಮಿಕ ಸಂಸ್ಕಾರಗಳು, ಆಹಾರ, ಹವ್ಯಕರ ಮದುವೆ ಪದ್ಧತಿ, ಭಾಷೆ, ವೇದ ಗೋತ್ರಗಳು, ಸಮಾಜದಲ್ಲಿ ಹವ್ಯಕರ ಹೊಣೆಗಾರಿಕೆಗಳು, ಹವ್ಯಕರ ಹಬ್ಬಗಳು ಸಂಪ್ರದಾಯಗಳು, ಕಲೆ ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.



Scanned with OKEN Scanner

# ೧೧) ಉಪಸಂಹಾರ

ಹಿಂದೆ ಹವೀಕರು ವೇದಾಧ್ಯಯನದಲ್ಲೆ ಸಂಪೂರ್ಣ ನಿರತರಾಗಿರುತ್ತಿದ್ದರಾದರೂ ವೇದವೊಂದನ್ನೇ ಓದಲು ಈ ಕಾಲದಲ್ಲಿ ಅನುಕೂಲ ಕಡಿಮೆಯಿದೆ ಎನ್ನುವುದು ನಿಜ. ಆದರೆ ವೇದದ ಬಗ್ಗೆ ಓದಲು, ನಮ್ಮ ದರ್ಶನಗಳು ಧರ್ಮ ಇತ್ಯಾದಿಗಳನ್ನು ಅರ್ಥೈಸಿಕೊಳ್ಳಲು ವ್ಯವಸ್ಥಿತವಾದ ಪ್ರಯತ್ನ ಮಾಡಲು ಅವಕಾಶವೂ ಇದೆ , ಅವಶ್ಯಕತೆಯೂ ಇದೆ. ವೇದವೆಂದರೆ ಏನು, ವಿಭಾಗಗಳು ಯಾವವು, ಉಪನಿಷತ್ತು ಎಂದರೆ ಏನು, ಅದರಿಂದ ಯಾರು ಪ್ರಭಾವಿತರಾದರು, ನಮ್ಮ ದರ್ಶನಗಳು ಯಾವವು (philosophy) ಇತ್ಯಾದಿ ಮಕ್ಕಳಿಗಾದರೂ ಕಲಿಸುವ ಅವಶ್ಯಕತೆ ಇದೆ. ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಇವಕ್ಕೆ ಪ್ರಸ್ಥಾನತ್ರಯ ಎಂದು ಹೆಸರು. ಇವುಗಳ ಬಗ್ಗೆ ತಿಳಿ ಹೇಳುವ ಕಿರು ಹೊತ್ತಗೆಗಳನ್ನು ಬರೆಯುವ ಬರೆದದ್ದನ್ನು ಲಭ್ಯವಾಗುವಂತೆ ಮಾಡುವ ಮತ್ತು ಇದ್ದುದ್ದನ್ನು ಮುಖ್ಯವಾಹಿನಿಗೆ ತಂದು ಮಕ್ಕಳಿಗೆ ಕಲಿಸುವ ಅಗತ್ಯ ಇದೆ. ಮುಂದಿನ ಪೀಳಿಗೆ ನಗರಗಳಲ್ಲಿ ವಿದೇಶದಲ್ಲಿ ಜೀವನಮಾಡಲಿಕ್ಕಿದೆ. ಅವರಿಗೆ ತಾವಾರೆಂಬ ಸ್ಪಷ್ಟ ತಿಳುವಳಿಕೆ ಮತ್ತು ಹೊಸ ಪರಿಸರದಲ್ಲಿ ನಮ್ಮ ಹಿರಿಯರು ಕಾದಿಟ್ಟ ಮೂಲ ಮೌಲ್ಯಗಳನ್ನು, ತತ್ವಗಳನ್ನು ಉಳಿಸಿಕೊಂಡು ಹೋಗಲು ಬೇಕಾದ ಸಾಮಗ್ರಿ ಒದಗಿಸುವ ಪ್ರಯತ್ನವನ್ನು ನಾವು ಮಾಡಬೇಕಿದೆ. ಹಿಂದಿನ ಕಾಲದ ಲ್ಲಿಬ್ರಾಹ್ಮಣರು ವೇದ, ಉಪನಿಷತ್ ಜೋತಿಷ್ಯ,ದೇವರ ಪೂಜೆ ಮಂತ್ರಗಳು ಕಲಿಯುತ್ತಿದ್ದರು, ಶಾಸ್ತ್ರಿಗಳು,ಜೋಯಿಸರು ಇದ್ದರು,ಈಗ ಆಧುನಿಕ ಕಾಲದಲ್ಲಿ ಬಹಳ ಕಡಿಮೆ ಜನ ಇದ್ದಾರೆ, ಜೀವನೋಪಾಯಕ್ಕಾಗಿ ಬೇರೆ ದಾರಿ ಹಿಡಿದಿದ್ದಾರೆ.



Scanned with OKEN Scanner